STD

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	798
ಮಾನ್ಯ ಸದಸ್ಯರ ಹೆಸರು	ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	20/12/2021
ಉತ್ತರಿಸುವ ಸಚಿವರು	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದ ಒಟ್ಟು ಎಷ್ಟು ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ: (ಜಿಲ್ಲಾವಾರು ವಿವರ ನೀಡುವುದು)	ಪ್ರಸ್ತುತ ರಾಜ್ಯದಲ್ಲಿ ಒಟ್ಟು 18 ಜಿಲ್ಲೆಗಳಲ್ಲಿ 17 ಸರ್ಕಾರಿ ವೈದ್ಯಕೀಯ ಕಾಲೇಜುಗಳು, 02 ದಂತ ವೈದ್ಯಕೀಯ ಕಾಲೇಜು ಮತ್ತು 02 ಇ.ಎಸ್.ಐ ಕಾಲೇಜುಗಳಿರುತ್ತವೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ** ದಲ್ಲಿರಿಸಿದೆ.
ಆ)	ರಾಜ್ಯ ಸರ್ಕಾರದಿಂದ ಇತ್ತೀಚೆಗೆ ಪ್ರಾರಂಭಿಸಲು ಉದ್ದೇಶಿಸಲಾಗಿದ್ದ ಕೆಲವು ಜಿಲ್ಲಾ ಸರ್ಕಾರಿ ಮೆಡಿಕಲ್ ಕಾಲೇಜುಗಳಿಗೆ ಮೂಲ ಸೌಕರ್ಯ ಲಭ್ಯವಿರುವುದಿಲ್ಲವೆಂಬ ಕಾರಣದಿಂದ ಅನುಮತಿ ನೀಡಲು ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದಿಂದ ನಿರಾಕರಿಸಲಾಗಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ	ಬಂದಿದೆ
ಇ)	ರಾಜ್ಯ ಸರ್ಕಾರವು ಮಂಜೂರಾತಿ ನೀಡಿರುವ ಜಿಲ್ಲಾ ಸರ್ಕಾರಿ ಮೆಡಿಕಲ್ ಕಾಲೇಜುಗಳ ಪೈಕಿ ಯಾವ ಯಾವ ಜಿಲ್ಲಾ ಸರ್ಕಾರಿ ಮೆಡಿಕಲ್ ಕಾಲೇಜು ಪ್ರಾರಂಭಿಸಲು ಎಂಸಿಐ ನಿಂದ ಅನುಮತಿ ನಿರಾಕರಿಸಲಾಗಿದೆ;	ಕೇಂದ್ರ ಪುರಸ್ಕೃತ ಯೋಜನೆಯೊಂದಿಗೆ ರಾಜ್ಯದಲ್ಲಿ ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳಿರದ ಜಿಲ್ಲೆಗಳಾದ ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾವೇರಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ತಲಾ 150 ಎಂಬಿಬಿಎಸ್ ಪ್ರವೇಶ ಮಿತಿಯೊಂದಿಗೆ 2021-22 ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲು ರಾಜ್ಯ ಸರ್ಕಾರದಿಂದ ಅನುಮತಿಯನ್ನು ನೀಡಲಾಗಿರುತ್ತದೆ. ಭಾರತೀಯ ವೈದ್ಯಕೀಯ ಪರಿಷತ್‌ನ Medical Assessment & Rating Board (MARB) ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾವೇರಿ ಮತ್ತು ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳನ್ನು 2021-22 ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಅನುಮತಿ ನೀಡಿರುವುದಿಲ್ಲ.

<table>
<tr>
<td>ಈ)</td>
<td>ಅನುಮತಿ ನಿರಾಕರಿಸಲಾಗಿರುವ ಸರ್ಕಾರಿ ಮೆಡಿಕಲ್ ಕಾಲೇಜುಗಳಿಗೆ ಅಗತ್ಯ ಮೂಲಸೌಕರ್ಯ ಒದಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?</td>
<td>
ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾವೇರಿ ಮತ್ತು ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳಿಗೆ ಈ ಕೆಳಕಂಡಂತೆ ಹುದ್ದೆಗಳನ್ನು ಸೃಜಿಸಲಾಗಿದೆ.
<table>
<tr><th>ಕ್ರ, ಸಂ</th><th>ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಹೆಸರು ಮತ್ತು ಆದೇಶ ಸಂಖ್ಯೆ</th><th>ಬೋಧಕ& ಬೋಧಕೇತರ ಹುದ್ದೆಗಳ ಸಂಖ್ಯೆ</th></tr>
<tr><td>1</td><td>ಚಿಕ್ಕಬಳ್ಳಾಪುರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಬಳ್ಳಾಪುರ (ಎಂಇಡಿ 525 ಎಂಎಂಸಿ 2019 ದಿನಾಂಕ 05/09/2020)</td><td>82</td></tr>
<tr><td>2</td><td>ಚಿಕ್ಕಮಗಳೂರು, ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಚಿಕ್ಕಮಗಳೂರು (ಎಂಇಡಿ 184 ಎಂಎಂಸಿ 2021 ದಿನಾಂಕ 17/04/2021)</td><td>89</td></tr>
<tr><td>3</td><td>ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾವೇರಿ (ಎಂಇಡಿ 184 ಎಂಎಂಸಿ 2021 ದಿನಾಂಕ 17/04/2021)</td><td>84</td></tr>
<tr><td>4</td><td>ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ (ಎಂಇಡಿ 184 ಎಂಎಂಸಿ 2021 ದಿನಾಂಕ 17/04/2021)</td><td>92</td></tr>
<tr><td></td><td>ಒಟ್ಟು</td><td>347</td></tr>
</table>
ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ಪ್ರತಿ ಕಾಲೇಜಿಗೆ ಕಟ್ಟಡ ಕಾಮಗಾರಿ ಹಾಗೂ ಉಪಕರಣ ಮತ್ತಿತರೆ ಖರೀದಿಗಾಗಿ ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
<table>
<tr><th>ಕ್ರ, ಸಂ</th><th>ಕಾಲೇಜಿನ ಹೆಸರು</th><th>ಬಿಡುಗಡೆಯಾದ ಮೊತ್ತ(ಲಕ್ಷಗಳು)</th></tr>
<tr><td>1</td><td>ಚಿಕ್ಕಬಳ್ಳಾಪುರ ವೈದ್ಯಕೀಯ ಕಾಲೇಜು</td><td>ರೂ. 25,799.31</td></tr>
<tr><td>2</td><td>ಚಿಕ್ಕಮಗಳೂರು ವೈದ್ಯಕೀಯ ಕಾಲೇಜು</td><td>ರೂ 16,666.00</td></tr>
<tr><td>3</td><td>ಹಾವೇರಿ ವೈದ್ಯಕೀಯ ಕಾಲೇಜು</td><td>ರೂ. 12,346.12</td></tr>
<tr><td>4</td><td>ಯಾದಗಿರಿ ವೈದ್ಯಕೀಯ ಕಾಲೇಜು</td><td>ರೂ. 16556.33</td></tr>
</table>

ಸಂಬಂದಿಸಿದ ಜಿಲ್ಲೆಗಳಲ್ಲಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ಜಿಲ್ಲಾ ಆಸ್ಪತ್ರೆಗಳನ್ನು ಬೋಧಕ ಆಸ್ಪತ್ರೆಗಳಾಗಿ ಕಾರ್ಯನಿರ್ವಹಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.
ಸದರಿ ಜಿಲ್ಲೆಗಳಲ್ಲಿನ ಇತರೆ ಇಲಾಖೆಗಳಿಗೆ/ಸಂಸ್ಥೆಗಳ ಒಡೆತನಕ್ಕೆ ಸಂಬಂದಿಸಿದ ಕಟ್ಟಡಗಳಲ್ಲಿ ಪ್ರಾರಂಬಿಕವಾಗಿ ತರಗತಿಗಳನ್ನು ಪ್ರಾರಂಭಿಸಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ.
ಪಿಠೋಪಕರಣ ಹಾಗೂ ಇತರೆ ಕಛೇರಿ ಉಪಕರಣಗಳನ್ನು ಒಳಗೊಂಡಂತೆ ಗ್ರಂಥಾಲಯಕ್ಕೆ ಅಗತ್ಯವಿರುವ ಪುಸ್ತಕ ಹಾಗೂ ಇತರೆ ನಿಯತ ಕಾಲಿಕೆಗಳನ್ನು ಸಂಗ್ರಹಿಸಲು ಖರೀದಿ ಆದೇಶ ನೀಡಲಾಗಿದೆ.

</td>
</tr>
</table>

ಸಂಖ್ಯೆ: ಎಂಇಡಿ 616 ಎಂಎಂಸಿ 2021

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ

Sl. No.	District	College Name
1.	Bangalore Urban	Bangalore Medical College and Research Centre
2.	Bangalore Urban	Shri Atal Bihari Vajpayee Medical College and Research Institute
3.	Bangalore Urban	ESIC Medical College & PGIMSR, Bangalore
4.	Bangalore Urban	Government Dental College & Research Institute, Bengaluru
5.	Belgaum	Belagavi Institute of Medical Sciences, Belagavi
6.	Bellary	Vijaynagara Institute of Medical Sciences
7.	Bellary	Government Dental College & Research Institute, Bellary
8.	Bidar	Bidar Institute of Medical Sciences, Bidar
9.	Chamarajnagar	Chamarajanagar Institute of Medical Sciences
10.	Dharwad	Karnataka Institute of Medical Sciences, Hubli
11.	Gadag	Gadag Institute of Medical Sciences, Gadag
12.	Gulbarga	ESIC Medical College, Gulbarga
13.	Gulbarga	Gulbarga Institute of Medical Sciences, Gulbarga
14.	Hassan	Hassan Institute of Medical Sciences
15.	Kodagu	Kodagu Institute of Medical Sciences, Kodagu
16.	Koppal	Koppal Institute of Medical Sciences, Koppal
17.	Mandya	Mandya Institute of Medical Sciences, Mandya
18.	Mysore	Mysore Medical College & Research Institute, Mysore
19.	Raichur	Raichur Institute of Medical Sciences, Raichur
20.	Shimoga	Shimoga Institute of Medical Sciences, Shimoga
21.	Uttara Kannada	Karwar Institute of Medical Sciences